ಹೊಸ ಪಠ್ಯಕ್ರಮ (೨೦೦೫-೦೬ ಮತ್ತು ೨೦೦೬-೦೭ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ)
**New Scheme** ( For Students studied during the Years 2005-06 & 2006-07 )

**Code No. 30-NS**

**Total No. of Questions : 21 ]** **[ Total No. of Printed Pages : 16**

# July, 2007

# ACCOUNTANCY

**( Kannada and English Versions )**

**( New Syllabus )**

**Time : 3 Hours ]** **[ Max. Marks : 90**

**( Kannada Version )**

## ಭಾಗ – A

ಈ ಕೆಳಗಿನವುಗಳಲ್ಲಿ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು :
$8 \times 2 = 16$

1. ಏಕ ನಮೂದು ಪದ್ಧತಿ ಎಂದರೇನು ?

2. ಏರಿಳಿತ ಬಂಡವಾಳ ಪದ್ಧತಿ ಎಂದರೇನು ?

3. ತ್ಯಾಗ ಪ್ರಮಾಣ ಎಂದರೇನು ?

4. ವಿಲೇವಾರಿ ಖಾತೆಯ ಲಾಭದ ಮೊತ್ತವನ್ನು ಪಾಲುಗಾರರಾದ A ಮತ್ತು B ಗೆ ಹಂಚಲು ಬರೆಯುವ ರೋಜು ದಾಖಲೆಯನ್ನು ಬರೆಯಿರಿ.

5. ಶೇರುಗಳ ಮುಟ್ಟುಗೋಲು ಎಂದರೇನು ?

6. ಕಂಪನಿ ಆಢಾವೆ ಪತ್ರಿಕೆಯ ಯಾವ ತಲೆಬರಹದಡಿ ಈ ಕೆಳಕಂಡವುಗಳನ್ನು ತೋರಿಸುತ್ತೀರಿ ?

   a) ಬರತಕ್ಕ ಹುಂಡಿಗಳು

   b) ಪ್ರಾರಂಭಿಕ ಖರ್ಚುಗಳು

7. ಮೂಲವೆಚ್ಚ ಅಥವಾ ನಿರ್ದಿಷ್ಟ ಕಂತಿನ ಪದ್ಧತಿಯಲ್ಲಿ ಸವಕಳಿಯ ಶೇಕಡ ಕೊಡದಿದ್ದಾಗ, ಸವಕಳಿ ಮೊತ್ತವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

8. ಬಂಡವಾಳ ವೆಚ್ಚಗಳಿಗೆ ಎರಡು ಉದಾಹರಣೆ ಕೊಡಿ.

9. ಗಣಕಯಂತ್ರದಲ್ಲಿ ( Computer ) ಮಾಹಿತಿ ಎಂದರೇನು ?

10. ಗಣಕಯಂತ್ರದ ಟ್ಯಾಲಿ ಎಂದರೇನು ?

[ Turn over

## ಭಾಗ – B

ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು :
$3 \times 6 = 18$

11. ಸೂರ್ಯ ಮತ್ತು ಚಂದ್ರ ಒಂದು ಪಾಲುಗಾರಿಕೆ ಸಂಸ್ಥೆಯ ಪಾಲುದಾರರು. ಸೂರ್ಯನು ಪ್ರತಿ ಎರಡು ತಿಂಗಳ ಕೊನೆಯ ದಿನದಂದು ರೂ. 2,000 ವನ್ನು ಸ್ವಂತ ವೆಚ್ಚಕ್ಕಾಗಿ ಉಪಯೋಗಿಸುತ್ತಾನೆ. ದಿನಾಂಕ 31. 12. 2006 ಕ್ಕೆ ಕೊನೆಗೊಳ್ಳುವ ವರ್ಷಕ್ಕೆ, ವಾರ್ಷಿಕ ಶೇ. 12 ರ ಬಡ್ಡಿಯಂತೆ, ಸೂರ್ಯನ ಸ್ವಂತ ವೆಚ್ಚದ ಮೇಲಿನ ಒಟ್ಟು ಬಡ್ಡಿಯನ್ನು, ಗುಣಲಬ್ಧ ಪದ್ಧತಿಯಲ್ಲಿ ಕಂಡುಹಿಡಿಯಿರಿ.

12. ಅನಿಲ್, ಸುನಿಲ್ ಮತ್ತು ಕಮಲ್ ಪಾಲುಗಾರಿಕೆ ಸಂಸ್ಥೆಯೊಂದರ ಪಾಲುಗಾರರು. ದಿನಾಂಕ 31. 12. 2002 ರಂದು ಸುನಿಲ್ ನಿವೃತ್ತಿ ಹೊಂದುತ್ತಾನೆ. ಎಲ್ಲಾ ಲೆಕ್ಕಾಚಾರದ ನಂತರ ಸುನಿಲ್ ಸಾಲದ ಖಾತೆಗೆ ರೂ. 35,000 ಬಾಕಿ ನೀಡಬೇಕಿದೆ. ದಿನಾಂಕ 1. 1. 2003 ರಂದು ಸುನಿಲನಿಗೆ ಮುಂದುವರಿಯುವ ಪಾಲುಗಾರರು ರೂ. 5.000 ವನ್ನು ತಕ್ಷಣ ನೀಡಿ ಉಳಿದ ರೂ. 30,000 ವನ್ನು ಮೂರು ವರ್ಷಗಳಿಗೆ ಸಮ ಕಂತುಗಳಲ್ಲಿ, ಶೇ. 12 ರ ಬಡ್ಡಿ ಸೇರಿಸಿ ಕೊಡಲು ಒಪ್ಪಿಕೊಳ್ಳುತ್ತಾರೆ.

ಸುನಿಲನ ಸಾಲ ಖಾತೆ ತೆರೆದು, ಮೂರು ವರ್ಷಗಳಿಗೆ ಅದು ಸಂಪೂರ್ಣ ಪಾವತಿಯಾಗುವಂತೆ ದಾಖಲಿಸಿ.

13. ಕೆಂಪ, ಬಿಳಿಯ ಮತ್ತು ಕರಿಯ ಪಾಲುಗಾರರಾಗಿ 3 : 2 : 1 ಪ್ರಮಾಣದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಾರೆ. ದಿನಾಂಕ 31. 12. 2006 ರಂದು ಅವರ ಆಢಾವೆ ಪತ್ರಿಕೆ ಕೆಳಕಂಡಂತಿದೆ :

**ದಿನಾಂಕ 31. 12. 2006 ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ದಣಿಗಳು | 26,000 | ಬ್ಯಾಂಕ್ ನಗದು | 25,000 |
| ಬರತಕ್ಕ ಹುಂಡಿಗಳು | 20,000 | ಋಣಿಗಳು | 35,000 |
| ಲಾಭ-ನಷ್ಟ ಖಾತೆ | 18,000 | ಸರಕು | 30,000 |
| ಬಂಡವಾಳಗಳು : | | ಪೀಠೋಪಕರಣ | 14,000 |
| ಕೆಂಪ ರೂ. 40,000 | | ಕಟ್ಟಡಗಳು | 30,000 |
| ಬಿಳಿಯ ರೂ. 30,000 | | ಯಂತ್ರಗಳು | 20,000 |
| ಕರಿಯ ರೂ. 20,000 | 90,000 | | |
| | **1,54,000** | | **1,54,000** |

ದಿನಾಂಕ 1. 07. 2006 ರಂದು ಕರಿಯ ಮರಣ ಹೊಂದುತ್ತಾನೆ. ಅವನ ಉತ್ತರಾಧಿಕಾರಿಗಳು ಈ ಕೆಳಕಂಡಂತೆ ಒಪ್ಪಿಕೊಳ್ಳುತ್ತಾರೆ :

a) ಕರಿಯನ ಬಂಡವಾಳ ತೆಗೆದುಕೊಳ್ಳಲು

b) ಹಂಚಿಕೆಯಾಗದ ಲಾಭ-ನಷ್ಟ ಖಾತೆಯ ಆತನ ಪಾಲನ್ನು ತೆಗೆದುಕೊಳ್ಳಲು

c) ಹಿಂದಿನ ವರ್ಷದ ಲಾಭಾಂಶದ ಆಧಾರದ ಮೇಲೆ ಈ ವರ್ಷದ ಲಾಭವನ್ನು ಕರಿಯ ಮರಣ ಹೊಂದಿದ ದಿನಾಂಕದವರೆಗೆ ಪಡೆಯಲು
ಹಿಂದಿನ ವರ್ಷ 2005 ರ ಲಾಭಾಂಶ ರೂ. 24,000

d) ಸಂಸ್ಥೆಯ ಕೀರ್ತಿಮೌಲ್ಯ ರೂ. 60,000 ವಾಗಿದ್ದು ಅದರ ಭಾಗ ಪಡೆಯಲು

e) ಮರಣ ದಿನಾಂಕದವರೆಗೆ ಸ್ವಂತ ವೆಚ್ಚ ರೂ. 3,000.

ಕರಿಯನ ಉತ್ತರಾಧಿಕಾರಿಗಳ ಖಾತೆ ತಯಾರಿಸಿ.

14. ಸ್ಟಾರ್ ಕಂಪನಿ ನಿ. ರೂ. 100 ಮುಖಬೆಲೆಯ 20,000 ಸಾಮಾನ್ಯ ಶೇರುಗಳನ್ನು ರೂ. 20 ಅಧಿಕ ಮೌಲ್ಯ ಸೇರಿಸಿ ಸಾರ್ವಜನಿಕರಿಗೆ ಬಿಡುಗಡೆ ಮಾಡಲು ನಿರ್ಧರಿಸಿದೆ. ಪ್ರತಿ ಶೇರು ಹಣವನ್ನು ಕೆಳಕಂಡಂತೆ ವಸೂಲು ಮಾಡುತ್ತದೆ.

ಅರ್ಜಿ ಹಣ ರೂ. 20

ಹಂಚಿಕೆ ಹಣ ರೂ. 60 (ಅಧಿಕ ಮೌಲ್ಯ ರೂ. 20 ಸೇರಿ)

ಮೊದಲ ಮತ್ತು ಕೊನೆ ಕರೆ ರೂ. 40

ಎಲ್ಲಾ ಶೇರುಗಳು ಹಂಚಿಕೆಯಾಗಿವೆ. ಮೊದಲ ಮತ್ತು ಕೊನೆ ಕರೆ ಹಣದಲ್ಲಿ 1,000 ಶೇರುಗಳನ್ನು ಹೊರತುಪಡಿಸಿ, ಉಳಿದ ಹಣ ವಸೂಲಿಯಾಗಿದೆ.

ಮೇಲ್ಕಂಡ ಶೇರು ವ್ಯವಹಾರಗಳನ್ನು ಕಂಪನಿಯ ರೋಜು ಪುಸ್ತಕದಲ್ಲಿ ದಾಖಲಿಸಿ.

15. ಗಣಕೀಕೃತ ಲೆಕ್ಕಶಾಸ್ತ್ರದ ಅನುಕೂಲತೆಗಳನ್ನು ವಿವರಿಸಿ.

## ಭಾಗ – C

ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು : $4 \times 14 = 56$

16. ಮಲ್ಲಿಕ್ ಎನ್ನುವ ಒಬ್ಬ ವ್ಯಾಪಾರಸ್ಥ ದಿನಾಂಕ 1. 1. 2006 ರಂದು ತನ್ನ ವ್ಯಾಪಾರ ಪ್ರಾರಂಭಿಸುತ್ತಾನೆ. ಅವನ ಪ್ರಾರಂಭಿಕ ಬಂಡವಾಳ ರೂ. 45,000. ದಿನಾಂಕ 1. 7. 2006 ರಂದು ಪುನಃ ಬಂಡವಾಳವಾಗಿ ರೂ. 15,000 ವನ್ನು ತೊಡಗಿಸುತ್ತಾನೆ. ತನ್ನ ಸ್ವಂತ ವೆಚ್ಚಗಳಿಗಾಗಿ ರೂ. 18,000 ಪಡೆಯುತ್ತಾನೆ.

ದಿನಾಂಕ 31. 12. 2006 ರಂದು ಅವನ ಹಣಕಾಸಿನ ಪರಿಸ್ಥಿತಿ ಕೆಳಕಂಡಂತಿದೆ :

| | ರೂ. |
|---|---|
| ಸರಕು | 26,000 |
| ಋಣಿಗಳು | 16,000 |
| ಪೀಠೋಪಕರಣ | 6,000 |
| ಬ್ಯಾಂಕ್ ನಗದು | 6,000 |
| ಕೈಯಲ್ಲಿ ನಗದು | 600 |
| ಬರತಕ್ಕ ಹುಂಡಿಗಳು | 4,600 |
| ಸ್ಥಾವರ ಮತ್ತು ಯಂತ್ರ | 20,000 |
| ದಣಿಗಳು | 16,000 |
| ಮೇಣಕಾಲಿಂದ ಸಾಲ | 6,000 |

*ಹೊಂದಾಣಿಕೆಗಳು :*

a) ಪೀಠೋಪಕರಣಗಳ ಮೇಲೆ ರೂ. 600 ಸವಕಳಿ.

b) ಯಂತ್ರಗಳ ಮೇಲೆ 10% ಸವಕಳಿ.

c) ಬಾಡಿಗೆ ಇನ್ನೂ ರೂ. 1,000 ಕೊಡಬೇಕಾಗಿದೆ.

d) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 5%.

ತಯಾರಿಸಿ :

i) ಮಲ್ಲಿಕ್‌ನ ಲಾಭ-ನಷ್ಟ ಪಟ್ಟಿ

ii) ಪುನರ್‌ವಿಮರ್ಶಿತ ಪತ್ರಿಕೆ

17. ಒಂದು ಸಂಸ್ಥೆ ದಿನಾಂಕ 1. 1. 2000 ದಂದು ರೂ. 25,000 ಮೌಲ್ಯದ ಗುತ್ತಿಗೆಯನ್ನು 5 ವರ್ಷ ಅವಧಿಗೆ ಪಡೆಯುತ್ತದೆ. ವರ್ಷಾಸನ ಪದ್ಧತಿಯ ಸವಕಳಿ ನೀಡಲು, ವರ್ಷಾಸನ ಕೋಷ್ಟಕ ದರದಲ್ಲಿ, ವಾರ್ಷಿಕ 5% ಬಡ್ಡಿಯಂತೆ, 5 ವರ್ಷ ಅವಧಿಗೆ ನೀಡಬೇಕಾದ ಸವಕಳಿ ಮೊತ್ತ ರೂ. 5774·37.

ಈ ಕೆಳಗಿನವುಗಳನ್ನು ತಯಾರಿಸಿ :

i) 5 ವರ್ಷಗಳಿಗೆ ಗುತ್ತಿಗೆ ಖಾತೆ

ii) 5 ವರ್ಷಗಳಿಗೆ ಬಡ್ಡಿ ಖಾತೆ

18. ಈ ಕೆಳಗಿನ ಆಢಾವೆ ಪತ್ರಿಕೆ ಮತ್ತು ಆಯ-ವ್ಯಯ ಖಾತೆ ಜಯಪ್ರಕಾಶ್ ಕಾಲೇಜು ಸಂಘದ್ದು.

**ದಿನಾಂಕ 31. 12. 2005 ರ ಆಢಾವೆ ಪತ್ರಿಕೆ**

| *ಹೊಣೆಗಾರಿಕೆಗಳು* | *ರೂ.* | *ಆಸ್ತಿಗಳು* | *ರೂ.* |
|---|---|---|---|
| ಬಂಡವಾಳ ನಿಧಿ | 32,000 | ಕಟ್ಟಡಗಳು | 30,000 |
| ವಂತಿಗೆ ಮುಂಗಡ | 600 | ಬರಬೇಕಾದ ವಂತಿಗೆ | 380 |
| ಬಾಕಿ ವೆಚ್ಚಗಳು | 1,400 | ಬರಬೇಕಾದ ಬಾಡಿಗೆ | 240 |
| ಸಾಲ | 5,000 | ಕೈಯಲ್ಲಿ ನಗದು | 10,000 |
| ಆದಾಯ-ವೆಚ್ಚ ಖಾತೆ | 1,620 | | |
| | **40,620** | | **40,620** |

ದಿನಾಂಕ 31. 12. 2006 ರ ಆಯ-ವ್ಯಯ ಖಾತೆ

| ಆಯ | ರೂ. | ವ್ಯಯ | ರೂ. |
|---|---|---|---|
| ಗೆ ಆರಂಭದ ಶಿಲ್ಕು ( 1. 1. 2006 ) | 10,000 | ಯಿಂದ ವೆಚ್ಚಗಳು | |
| " ವಂತಿಗೆಗಳು : | | 2005 – ರೂ. 1,200 | |
| 2005 – ರೂ. 200 | | 2006 – ರೂ. 2,000 | 3,200 |
| 2006 – ರೂ. 2,100 | | " ಗುತ್ತಿಗೆ ಭೂಮಿ | 4,000 |
| 2007 – ರೂ. 150 | 2,450 | " ಮುದ್ರಣ | 400 |
| " ಪ್ರವೇಶ ಶುಲ್ಕ | 800 | " ಉಪಹಾರ ಖರ್ಚು | 2,000 |
| " ಬಾಡಿಗೆ | 700 | " ಅಂತಿಮ ಶಿಲ್ಕು | 8,350 |
| " ಉಪಹಾರದಿಂದ ಆದಾಯ | 4,000 | | |
| | 17,950 | | 17,950 |

*ಹೊಂದಾಣಿಕೆಗಳು :*

a) ಬಾಕಿ ಕೊಡಬೇಕಾಗಿರುವ ಖರ್ಚುಗಳು ರೂ. 500.

b) ಬರಬೇಕಾಗಿರುವ ವಂತಿಗೆ ರೂ. 100.

c) ಸಂಬಳ ಬಾಕಿ ರೂ. 200.

d) ಕಟ್ಟಡಗಳ ಮೇಲೆ ಸವಕಳಿ ರೂ. 2,000.

e) ಅರ್ಧದಷ್ಟು ಪ್ರವೇಶ ಶುಲ್ಕವನ್ನು ಬಂಡವಾಳಗೊಳಿಸಿ.

ಈ ಕೆಳಗಿನವುಗಳನ್ನು ತಯಾರಿಸಿ :

i) ದಿನಾಂಕ 31. 12. 2006 ರ ಆದಾಯ ಮತ್ತು ವೆಚ್ಚ ಖಾತೆ

ii) ಅದೇ ದಿನಾಂಕದ ಅಢಾವೆ ಪತ್ರಿಕೆ

19. ಶರತ್ ಮತ್ತು ಭರತ್ ಎಂಬ ಪಾಲುಗಾರರು ತಮ್ಮ ಲಾಭ-ನಷ್ಟಗಳನ್ನು 2 : 1 ಪ್ರಮಾಣದಲ್ಲಿ ಹಂಚಿಕೊಳ್ಳುವರು. ದಿನಾಂಕ 31. 12. 2006 ರಂದು ಅವರ ಅಢಾವೆ ಪತ್ರಿಕೆ ಕೆಳಗಿನಂತಿದೆ :

*ದಿನಾಂಕ 31. 12. 2006 ರ ಅಢಾವೆ ಪತ್ರಿಕೆ*

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಧನಿಗಳು | 12,000 | ನಗದು | 10,000 |
| ಕೊಡತಕ್ಕ ಹುಂಡಿಗಳು | 8,000 | ಋಣಿಗಳು | 5,000 |
| ಕಾಯ್ದಿಟ್ಟ ನಿಧಿ | 9,000 | ಸರಕು | 10,000 |
| *ಬಂಡವಾಳ ಖಾತೆಗಳು :* | | ಪೀಠೋಪಕರಣ | 4,000 |
| ಶರತ್ ರೂ. 20,000 | | ಕಟ್ಟಡಗಳು | 40,000 |
| ಭರತ್ ರೂ. 20,000 | 40,000 | | |
| | 69,000 | | 69,000 |

ಲಲಿತ್‌ಗೆ $\frac{1}{5}$ ಭಾಗ ಲಾಭಾಂಶಕ್ಕೆ ಈ ಕೆಳಕಂಡ ಕರಾರುಗಳ ಮೇಲೆ ಪಾಲುಗಾರಿಕೆಗೆ ಪ್ರವೇಶ ನೀಡಲಾಯಿತು :

a) ಅವನು ರೂ. 25,000 ನಗದನ್ನು ಬಂಡವಾಳವಾಗಿ ತರಬೇಕು.

b) ಕಟ್ಟಡಗಳ ಮೌಲ್ಯದಲ್ಲಿ ರೂ. 7,000 ಹೆಚ್ಚಳವಾಗಬೇಕು.

c) ಪೀಠೋಪಕರಣಗಳ ಮೇಲೆ ಸವಕಳಿ ರೂ. 800.

d) ಸರಕಿನ ಮೇಲೆ ಸವಕಳಿ 10%.

e) ಸಂಸ್ಥೆಯ ಒಟ್ಟು ಕೀರ್ತಿಮೌಲ್ಯ ರೂ. 24,000 ವನ್ನು ಸೃಷ್ಟಿಸಿ ( Raised ) ತೋರಿಸಬೇಕು.

f) ಮುದ್ರಣ ವೆಚ್ಚದ ಬಾಕಿ ರೂ. 400.

ತಯಾರಿಸಿ :

i) ಪುನರ್‌ಮೌಲ್ಯಮಾಪನ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ಹೊಸ ಸಂಸ್ಥೆಯ ಪ್ರಾರಂಭದ ಆಢಾವೆ ಪತ್ರಿಕೆ

20. ರೂಪ, ದೀಪ ಮತ್ತು ಕೃಪ ಪಾಲುಗಾರರು ತಮ್ಮ ಲಾಭ-ನಷ್ಟಗಳನ್ನು 2 : 1 : 1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 31. 12. 2006 ರಂದು ಅವರ ಆಢಾವೆ ಪತ್ರಿಕೆ ಕೆಳಕಂಡಂತಿದೆ :

**ದಿನಾಂಕ 31. 12. 2006 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಕೊಡತಕ್ಕ ಹುಂಡಿಗಳು | 2,300 | ನಗದು | 1,000 |
| ಧಣಿಗಳು | 5,700 | ಬರತಕ್ಕ ಹುಂಡಿಗಳು | 400 |
| ಕಾಯ್ದಿಟ್ಟ ನಿಧಿ | 4,000 | ಸರಕು | 20,000 |
| *ಬಂಡವಾಳಗಳು :* | | ಋಣಿಗಳು ರೂ. 7,000 | |
| ರೂಪ ರೂ. 30,000 | | − ಮೀಸಲು ರೂ. 400 | 6,600 |
| ದೀಪ ರೂ. 20,000 | | ಜಂಟಿ ಜೀವ ವಿಮೆ | 4,000 |
| ಕೃಪ ರೂ. 20,000 | 70,000 | ಯಂತ್ರಗಳು | 50,000 |
| | **82,000** | | **82,000** |

ಮೇಲ್ಕಂಡ ದಿನಾಂಕದಂದು ಪಾಲುಗಾರಿಕೆ ಸಂಸ್ಥೆಯನ್ನು ವಿಸರ್ಜಿಸಿದಾಗ ಕಂಡುಬಂದ ವಿವರಗಳು :

a) ರೂಪ ಜಂಟಿ ಜೀವ ವಿಮೆಯನ್ನು ರೂ. 5,000 ಕ್ಕೆ ತೆಗೆದುಕೊಳ್ಳುತ್ತಾಳೆ.

b) ಹಣ ಸಂಗ್ರಹಣೆ :

ಸರಕಿನಿಂದ ರೂ. 22,000

ಋಣಿಗಳಿಂದ ರೂ. 4,100

ಯಂತ್ರಗಳಿಂದ ರೂ. 58,000

ಬರತಕ್ಕ ಹುಂಡಿಗಳಿಂದ ಪೂರ್ತಿ ಹಣ

c) ವಿಲೇವಾರಿ ಖರ್ಚುಗಳು ರೂ. 500.

*ತಯಾರಿಸಿ :*

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ನಗದು ಖಾತೆ

21. ಸುಂದರ್ ಕಂಪನಿ ನಿ., ಹುಬ್ಬಳ್ಳಿ ಇವರ ತಾಳೆ ಪಟ್ಟಿ ಈ ಕೆಳಕಂಡಂತಿದೆ :

**ದಿನಾಂಕ 31. 12. 2006 ರ ತಾಳೆ ಪಟ್ಟಿ**

| ವಿವರಗಳು | ಖರ್ಚು ರೂ. | ಜಮಾ ರೂ. |
|---|---|---|
| ಶೇರು ಬಂಡವಾಳ<br>( ರೂ. 10 ರ 25,000 ಶೇರುಗಳು ) | — | 2,50,000 |
| ಸರಕು ( 1. 1. 06 ) | 45,000 | — |
| ಕೂಲಿ | 40,000 | — |
| ಖರೀದಿ ಮತ್ತು ಮಾರಾಟ | 1.25,000 | 2,00,000 |
| ಸರಕು ಸಾಗಣೆ ವೆಚ್ಚ | 10,000 | — |
| ಸಂಬಳ | 10,000 | — |
| ಬಾಡಿಗೆ | 5,000 | — |
| ಸೋಡಿ | 4,000 | 3,000 |
| ಇತರೆ ಖರ್ಚುಗಳು | 3,500 | — |

*Contd....*

[ Turn over

| ವಿವರಗಳು | ಖರ್ಚು ರೂ. | ಜಮಾ ರೂ. |
|---|---|---|
| ಕರಡು ಸಾಲ | 1,000 | — |
| ಲಾಭ-ನಷ್ಟ ಖಾತೆ | — | 11,000 |
| ಲಾಭಾಂಶ | 2,500 | — |
| ಮಧ್ಯಂತರ ಲಾಭಾಂಶ | 1,500 | — |
| ಋಣಿಗಳು ಮತ್ತು ದಣಿಗಳು | 35,000 | 24,000 |
| ಕಟ್ಟಡಗಳು | 80,000 | — |
| ಯಂತ್ರಗಳು | 25,000 | — |
| ಹೂಡಿಕೆಗಳು | 75,000 | — |
| ಕಾಯ್ದಿಟ್ಟ ನಿಧಿ | — | 12,000 |
| ನೌಕರರಿಗೆ ಸಾಲ | 2,000 | — |
| ನಗದು | 25,500 | — |
| 6% ಡಿಬೆಂಚರುಗಳು (ಸಾಲಪತ್ರ) | — | 50,000 |
| ಕರೆ ಬಾಕಿ | 10,000 | — |
| ಕೀರ್ತಿಮೌಲ್ಯ | 50,000 | — |
| | **5,50,000** | **5,50,000** |

*ಹೊಂದಾಣಿಕೆಗಳು :*

a) ದಿನಾಂಕ 31. 12. 2006 ರಂದು ಸರಕು ಮೌಲ್ಯ ರೂ. 50,000.

b) ರೂ. 3,000 ವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿ.

c) ಕರಡು ಸಾಲ ಮೀಸಲಿಗೆ 5% ಇರಲಿ.

d) ಯಂತ್ರೋಪಕರಣಗಳ ಮೇಲೆ ಸವಕಳಿ 10% ಇರಲಿ.

e) ಡಿಬೆಂಚರ್ (ಸಾಲಪತ್ರ) ಗಳ ಮೇಲಿನ ಒಂದು ವರ್ಷದ ಬಡ್ಡಿ ಬಾಕಿ ಇದೆ.

ಅಂತಿಮ ಖಾತೆಗಳನ್ನು ತಯಾರಿಸಿ.

**( English Version )**

**SECTION – A**

Answer any *eight* questions, each carrying *two* marks. $8 \times 2 = 16$

1. What is Single Entry System ?

2. What is Fluctuating Capital System ?

3. What is Sacrifice Ratio ?

4. Give journal entry to transfer Realisation A/c profit to partners *A* and *B*.

5. What is forfeiture of shares ?

6. Under what headings will you show the following items in Company's Balance sheet ?

   a) Bills Receivable

   b) Preliminary Expenses.

7. Write the formula for calculating the amount of depreciation under original cost method if percentage is not given.

8. Give two examples for Capital expenditures.

9. What is Information in computer ?

10. What is Tally in computer ?

**SECTION – B**

Answer any *three* questions, each carrying *six* marks. $3 \times 6 = 18$

11. Surya and Chandra are partners of a firm. Surya is drawing Rs. 2,000 at the end of every two months. Calculate the interest at 12% p.a. on drawings of Surya for the year ending 31st December, 2006 under product method.

12. Anil, Sunil, Kamal are partners in a firm. Sunil retires on 31.12.2002. Sunil's Loan A/c shows a credit balance of Rs. 35,000 on 1.01.2003. Continuing partners paid Rs. 5,000 to Sunil and agreed to pay the balance of Rs. 30,000 in three yearly equal instalments with interest at 12% p.a. Show Sunil's Loan A/c until it is paid off.

13. Red, White and Black are partners sharing profits and losses in the ratio of 3 : 2 : 1. On 31.12.2006 their Balance Sheet is as follows :

**Balance Sheet as on 31. 12. 2006**

| *Liabilities* | *Rs.* | *Assets* | *Rs.* |
|---|---|---|---|
| Sundry Creditors | 26,000 | Cash at Bank | 25,000 |
| Bills Payable | 20,000 | Debtors | 35,000 |
| Profit and Loss a/c | 18,000 | Stock | 30,000 |
| Capital : | | Furniture | 14,000 |
| Red Rs. 40,000 | | Buildings | 30,000 |
| White Rs. 30,000 | | Machinery | 20,000 |
| Black Rs. 20,000 | 90,000 | | |
| | 1,54,000 | | 1,54,000 |

Black died on 1.07.2006 and the partnership deed provides in the event of death of a partner that his executors should be entitled to :

a) his Capital on the date of last Balance Sheet.

b) his share of undistributed profits or losses.

c) his share of profit upto the date of death on the basis of previous year profit.

The profit for 2005 was Rs. 24,000.

d) his share of goodwill. Firm's goodwill is valued at Rs. 60,000.

e) drawings upto the date of death Rs. 3,000.

Prepare Black's Executors A/c.

14. The Star Co. Ltd. decided to issue 20,000 equity shares of Rs. 100 each with a premium of Rs. 20. The amount is payable as follows :

on application Rs. 20

on allotment Rs. 60 ( including premium amount Rs. 20 )

on first and final call Rs. 40.

All the shares were subscribed and all the money received except the first and final call on 1000 shares.

Give Journal entries.

15. Explain the advantages of Computer accounting.

## SECTION – C

Answer any *four* from the following questions, each carrying *fourteen* marks : 4 × 14 = 56

16. Mallik, a businessman started his business on 1.01.2006 with an opening capital of Rs. 45,000.

On 1.07.2006 he invested Rs. 15,000 as additional capital. He used Rs. 18,000 for his personal use.

His financial position on 31.12.2006 was as follows :

| | Rs. |
|---|---|
| Stock of goods | 26,000 |
| Sundry debtors | 16,000 |
| Furniture | 6,000 |
| Cash at Bank | 6,000 |
| Cash in hand | 600 |
| Bills Receivable | 4,600 |
| Plant and Machinery | 20,000 |
| Sundry Creditors | 16,000 |
| Loan from Menaka | 6,000 |

*Adjustments* :

a) Depreciate furniture by Rs. 600.

b) Depreciate plant & machinery by 10%.

c) Outstanding rent Rs. 1,000.

d) Allow interest on Capital at 5% p.a.

Prepare :

i) Statement of profit or loss

ii) Revised statement of affairs.

17. A company acquires lease on Jan. 1, 2000 for a term of 5 years by payment of Rs. 25,000. It is proposed to depreciate the lease by Annuity method, charging 5% interest. As per Annuity tables, the amount to be written off annually amounts to Rs. 5774·37.

Show the (i) Lease Account and (ii) Interest Account for five years.

18. Following is the Balance Sheet and Receipts and Payments account of Jayaprakash College Association.

**Balance Sheet as on 31. 12. 2005**

| *Liabilities* | Rs. | *Assets* | Rs. |
|---|---|---|---|
| Capital Fund | 32,000 | Building | 30,000 |
| Subscription received in advance | 600 | Subscription O/s | 380 |
| Outstanding expenses | 1,400 | O/s Rent | 240 |
| Loan | 5,000 | Cash in hand | 10,000 |
| Income & Expenditure a/c | 1,620 | | |
| | 40,620 | | 40,620 |

**Receipts and Payments A/c**
**for the year ended 31. 12. 2006**

| *Receipts* | *Rs.* | *Payments* | *Rs.* |
|---|---|---|---|
| To Balance on 1.01.2006 | 10,000 | By Expenses | |
| ,, Subscriptions | | 2005 – Rs. 1,200 | |
| 2005 – Rs. 200 | | 2006 – Rs. 2,000 | 3,200 |
| 2006 – Rs. 2,100 | | ,, Leasehold land | 4,000 |
| 2007 – Rs. 150 | 2,450 | ,, Interest | 400 |
| ,, Entrance fees | 800 | ,, Refreshment Expenses | 2,000 |
| ,, Rent | 700 | ,, Balance on 31.12.2006 | 8,350 |
| ,, Income from Refreshments | 4,000 | | |
| | 17,950 | | 17,950 |

*Adjustments* :

a) Expenses due but not paid Rs. 500.

b) Subscriptions due but not received Rs. 100.

c) Salary due but not paid Rs. 200.

d) Depreciation on Building Rs. 2,000.

e) Half of the Entrance fees to be capitalised.

Prepare :

i) Income and Expenditure for the year ending 31.12.2006.

ii) Balance Sheet as on that date.

19. Sarat and Bharat are sharing profits and losses in the ratio of 2 : 1. On 31.12.2006 their Balance Sheet was as follows :

**Balance Sheet as on 31. 12. 2006**

| *Liabilities* | *Rs.* | *Assets* | *Rs.* |
|---|---|---|---|
| Creditors | 12,000 | Cash in hand | 10,000 |
| Bills Payable | 8,000 | Debtors | 5,000 |
| Reserve Fund | 9,000 | Stock | 10,000 |
| Capital Account : | | Furniture | 4,000 |
| Sarat Rs. 20,000 | | Building | 40,000 |
| Bharat Rs. 20,000 | 40,000 | | |
| | 69,000 | | 69,000 |

They admit Lalit into partnership giving him $\frac{1}{5}$ share in the future profit on the following terms :

a) The new partner should bring Rs. 25,000 as his capital.

b) Value of Buildings is to be appreciated by Rs. 7,000.

c) Furniture to be depreciated by Rs. 800.

d) Stock is valued at 10% less than the book value.

e) The Goodwill Account is to be raised at Rs. 24,000.

f) There is an outstanding printing bill for Rs. 400.

Prepare :

i) Revaluation Account

ii) Partners' Capital Accounts

iii) Opening Balance Sheet of the new firm.

20. Roopa, Deepa and Kripa were partners sharing profits and losses in the ratio of 2 : 1 : 1. Their Balance Sheet as on 31.12.2006 was as follows :

**Balance Sheet as on 31. 12. 2006**

| *Liabilities* | *Rs.* | *Assets* | *Rs.* |
|---|---|---|---|
| Bills Payable | 2,300 | Cash in hand | 1,000 |
| Creditors | 5,700 | Bills Receivable | 400 |
| Reserve | 4,000 | Stock | 20,000 |
| Capital : | | Debtors Rs. 7,000 | |
| Roopa Rs. 30,000 | | *Less* Provision Rs. 400 | 6,600 |
| Deepa Rs. 20,000 | | Joint Life Policy | 4,000 |
| Kripa Rs. 20,000 | 70,000 | Machinery | 50,000 |
| | 82,000 | | 82,000 |

The firm was dissolved on the above date and the details available are :

a) Roopa took over the Joint Life Policy for Rs. 5,000.

b) Amount realised as follows :

Stock Rs. 22,000

Debtors Rs. 4,100

Machinery Rs. 58,000

Bills on hand realised in full.

c) Realisation Expenses paid Rs. 500.

Prepare :

i) Realisation Account

ii) Partners' Capital Accounts

iii) Cash Account.

21. Following is the Trial Balance of Sundar Company Limited, Hubli.

**Trial Balance as on 31.12.2006**

| Particulars | Debit Balance Rs. | Credit Balance Rs. |
|---|---|---|
| Share Capital (25,000 shares of Rs. 10 each) | — | 2,50,000 |
| Stock ( 1.01.2006 ) | 45,000 | — |
| Wages | 40,000 | — |
| Purchases and Sales | 1,25,000 | 2,00,000 |
| Freight | 10,000 | — |
| Salary | 10,000 | — |
| Rent | 5,000 | — |
| Discount | 4,000 | 3,000 |
| Sundry expenses | 3,500 | — |
| Bad debts | 1,000 | — |
| Profit and Loss a/c | — | 11,000 |
| Dividend | 2,500 | — |
| Interim Dividend | 1,500 | — |
| Debtors and Creditors | 35,000 | 24,000 |
| Buildings | 80,000 | — |
| Machinery | 25,000 | — |
| Investments | 75,000 | — |
| Reserve Fund | — | 12,000 |
| Loans to Employees | 2,000 | — |
| Cash | 25,500 | — |
| 6% Debentures | — | 50,000 |
| Calls in arrears | 10,000 | — |
| Goodwill | 50,000 | — |
| | 5,50,000 | 5,50,000 |

*Adjustments* :

a) Stock on 31.12.2006 Rs. 50,000.

b) Transfer Rs. 3,000 to Reserve Fund.

c) RBD at 5%.

d) Depreciate Machinery at 10%.

e) Outstanding interest on debentures for one year.

Prepare Final Accounts.